Rotary 2024-25

THE MAGIC OF ROTARY

ಮಿಡ್‌ಟೌನ್ ನ್ಯೂಸ್

# Midtown News

In House Bulletin of Rotary Club Shimoga Mid Town

R.I. President : Rtn. Stephanie A. Urchick
Dist. Governor : Rtn. Dev Anand
Asst. Governor : Rtn. Nagaraj S.R.

President : Rtn. Suresh Kumar D.
Secretary : Rtn. Faheem Hussain

Director : Rtn. Badriprasad T.A.
Editor : Rtn. Meera Nadig
Co-Chairmen : Rtn. Anand I.R.
Members : Rtn. G.N.N. Murthy, Rtn. Faheem Hussain

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

**Vol. 41** **16 - 1 - 2025** **ISSUE 22**

## VOCATIONAL SERVICE MONTH

### ದಿನಾಂಕ 9-1-2025ರ ವಾರದ ಸಭೆಯ ವರದಿ

ದಿನಾಂಕ 9-1-2025 ರ ಸಭೆಯು ಏಳನೆಯ ಕ್ಲಬ್ ಅಫೇರ್ಸ್ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ




ರೋಟರಿ ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ರೋಟರಿ ಮಾಹಿತಿಯನ್ನು ಓದಿದರು.

ಕಾರ್ಯದರ್ಶಿಗಳಾದ ರೊ. ಫಹೀಂ ಹುಸೇನ್ ಇವರು ದಿನಾಂಕ 2-1-2025ರಂದು ನಡೆದ ಕಾರ್ಯಕಾರಿ ಮಂಡಳಿಯ ವರದಿಯನ್ನು ಓದಿ ಸಭೆಯ ಅನುಮೋದನೆಯನ್ನು ಪಡೆದುಕೊಂಡರು.




ಡಿಸೆಂಬರ್ ತಿಂಗಳ ಲೆಕ್ಕಪತ್ರದ ವರದಿಯನ್ನು ಖಜಾಂಚಿಗಳಾದ ರೊ. ಡಾ|| ಧರಣಿ ಆರ್. ದೇವಾಂಗಿ ಇವರು ಸಭೆಯಲ್ಲಿ ಓದಿ ಸದಸ್ಯರಿಂದ ಅನುಮೋದನೆಯನ್ನು ಪಡೆದುಕೊಂಡರು.

ಅಧ್ಯಕ್ಷರು ತಮ್ಮ ಪ್ರಕಟಣೆಯಲ್ಲಿ ಜನವರಿ 10ರಂದು ನಡೆಯುವ ಅಡಿಕೆ ಮತ್ತು ಕಾಳುಮೆಣಸು ಬೆಳೆಯ ತಾಂತ್ರಿಕ ಮಾಹಿತಿ ಕಾರ್ಯಾಗಾರ, 11ರಂದು ನಡೆಯುವ **'ವಿಕಸನ'** ವಲಯ ಮಟ್ಟದ ಇಂಟ್ರಾಕ್ಟ್ ಕಾನ್ಫರೆನ್ಸ್ ಮತ್ತು ಮಿಡ್‌ಟೌನ್ ಚಾರಿಟಿ ಫೌಂಡೇಷನ್ ನಡೆಸಲಿರುವ ಸಿಎಂಇ ಕಾರ್ಯಕ್ರಮಗಳ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ನೀಡಿ ಕ್ಲಬ್ಬಿನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿಕೊಂಡರು. ಹಾಗೂ 24,25 ಮತ್ತು 26ರಂದು ಉಡುಪಿಯಲ್ಲಿ ನಡೆಯಲಿರುವ ರೋಟರಿ ಜಿಲ್ಲಾ ಸಮ್ಮೇಳನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು

## ವಾರದ ಸಭೆ

ದಿನಾಂಕ : **16-1-2025, ಗುರುವಾರ**

ಸಮಯ : **ಸಂಜೆ 7.30ಕ್ಕೆ**

ಅತಿಥಿ : **ಶ್ರೀ ಕಾಂತೇಶ್ ಅಂಬಿಗೇರ್**
**Director, CBRSETI, Holalur**

ವಿಷಯ : **ಸ್ವಉದ್ಯೋಗ ಮತ್ತು ವೃತ್ತಿಪರ ತರಬೇತಿ**

ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳುವಂತೆ ಸಲಹೆಯನ್ನು ನೀಡಿದರು.

ಮಾಜಿ ಅಸಿಸ್ಟೆಂಟ್ ಗೌರ್ನರ್‌ರಾದ ರೊ. ರಾಜೇಂದ್ರ ಪ್ರಸಾದ್ ಎಂ.ಆರ್. ರವರು ಡಿಸ್ಟ್ರಿಕ್ಟ್ ಗ್ಲೋಬಲ್ ಗ್ರಾಂಟ್‌ನ ಉದ್ದ ಮತ್ತು ಅದರ ಆಳದ




ಬಗ್ಗೆ ಅನೇಕ ಮಾಹಿತಿಯನ್ನು ಸಭೆಯಲ್ಲಿ ಹಂಚಿಕೊಂಡರು.

ರೊ. ಮದನ್‌ಲಾಲ್ ಮತ್ತು ರೊ. ವೀಣಾ ವಿಶ್ವನಾಥ್ ಇವರು ಇಂದಿನ




ಸಭೆಯ ಹಾಜರಾತಿ ಬಹುಮಾನಕ್ಕೆ ಪಾತ್ರರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಫಹೀಂ ಹುಸೇನ್ ವಂದನಾರ್ಪಣೆಯನ್ನು ನೆರವೇರಿಸಿದರು.

### 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?

**Donate Blood and Save Lives**






ದಿನಾಂಕ 10-1-2025ರಂದು ಶಿವಮೊಗ್ಗ ಮಿಡ್‌ಟೌನ್ ಮತ್ತು ಮಲೆನಾಡು ರೋಟರಿ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ತೋಟಗಾರಿಕೆ ಇಲಾಖೆ ಇವರ ಸಹಯೋಗದೊಂದಿಗೆ ಅಡಿಕೆ ಮತ್ತು ಕಾಳುಮೆಣಸು ಬೆಳೆಯ ತಾಂತ್ರಿಕ ಮಾಹತಿ ಕಾರ್ಯಾಗಾರವನ್ನು ರೋಟರಿ ಕ್ಲಬ್ ಮಿಡ್‌ಟೌನ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾದ ಡಾ. ಭರತ್ ಕುಮಾರ್‌ರವರು ಮೇಲೆ ತಿಳಿಸಿರುವ ವಿಷಯದ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು. ಕಾರ್ಯಾಗಾರವು ಅದ್ಭುತವಾಗಿ ಮೂಡಿಬಂದಿತು.






ದಿನಾಂಕ 11-1-2025ರ ಬೆಳಿಗ್ಗೆ 10 ಗಂಟೆಗೆ ರೋಟರಿ ಮಿಡ್‌ಟೌನ್ ಹಾಲ್‌ನಲ್ಲಿ **'ವಿಕಸನ'** - ರೋಟರಿ ವಲಯ ಮಟ್ಟದ ಇಂಟರ್ಯಾಕ್ಟ್ ಕಾನ್ಫರೆನ್ಸ್ ಕಾರ್ಯಕ್ರಮವನ್ನು ನಡೆಸಲಾಯಿತು. ಮುಖ್ಯ ಅತಿಥಿಯಾಗಿ ವಲಯ-10ರ ಅಸಿಸ್ಟೆಂಟ್ ಗೌವರ್ನರ್ ರೊ. ನಾಗರಾಜ್ ಎಸ್.ಆರ್., ಗೌರವ ಅತಿಥಿಗಳಾಗಿ ರೊ. ರಾಜೇಂದ್ರ ಪ್ರಸಾದ್ ಎಂ.ಆರ್., ರೊ. ಪ್ರೊ. ಸತ್ಯನಾರಾಯಣ, ರೊ. ಆದರ್ಶ ಹೆಚ್.ವಿ., ರೊ. ವಿ.ಜಿ. ಹೆಗ್ಡೆ, ಸಂಪನ್ಮೂಲ ವ್ಯಕ್ತಿಗಳಾಗಿ ಹೆಚ್.ಎಸ್. ನವೀನ್‌ಕುಮಾರ್, ತಿರುಮಲೇಶ್ ಜಿ. ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೊ. ಕೆ. ಸೂರ್ಯನಾರಾಯಣ ಉಡಪರವರು ವಹಿಸಿದ್ದರು.

# ROTARY INFORMATION

## January - Vocational Services



**Rtn. Suresh Kumar D.**

Vocational Service Month During this period, clubs highlight the importance of the business and professional life of each Rotarian. Special activities promote the vocational avenue of service.

- Distribute Four-way Test
- Distribute Vocational Awards to outstanding individuals, Arrange Vocational Visits
- Awareness seminar on career guidance, Organize / Arrange in Plant Training
- Start Vocational Education / Skill Guidance Centre.
- Helping Physically Challenged people to gets jobs.








ದಿನಾಂಕ 11-1-2025ರ ಶನಿವಾರ ಸಂಜೆ 7.30 ಗಂಟೆಗೆ ನಗರದ ಬಸವನಗುಡಿಯ ಸರ್ಕಾರಿ ನೌಕರರ ವಿಕಾಸ ಕೇಂದ್ರದಲ್ಲಿ ಶಿವಮೊಗ್ಗ ಮಿಡ್‌ಟೌನ್ ರೋಟರಿ ಚಾರಿಟಿ ಫೌಂಡೇಷನ್ ವತಿಯಿಂದ ಮತ್ತು ಭಾರತೀಯ ವೈದ್ಯಕೀಯ ಸಂಘ, ಶಿವಮೊಗ್ಗ ಶಾಖೆಯ ಸಹಯೋಗದಲ್ಲಿ ಮುಂದುವರೆದ ವೈದ್ಯಕೀಯ ಶಿಕ್ಷಣ (ಸಿಎಂಇ)ದ ಭಾಗವಾಗಿ ಟ್ರಾನ್ಸ್‌ಫ್ಯೂಜನ್ ಮೆಡಿಸಿನ್ ಕುರಿತು ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವೈದ್ಯಕೀಯ ಸಲಹೆಗಾರ, ಟ್ರಾನ್ಸ್‌ಫ್ಯೂಜನ್ ಮೆಡಿಸಿನ್ ಮುಖ್ಯಸ್ಥ ಡಾ|| ಶಿವರಾಮ್ ಚಂದ್ರಶೇಖರ್ ಮತ್ತು ನಿಮಾನ್ಸ್‌ನ ಡಾ|| ವಿಜಯ್ ಕುಮಾವತ್‌ರವರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಡಾ|| ಶಿವರಾಮಕೃಷ್ಣ ಇವರು ಮಾತನಾಡಿ ರಾಷ್ಟ್ರದಲ್ಲೇ ಅತ್ಯುತ್ತಮ ಬ್ಲಡ್ ಬ್ಯಾಂಕನ್ನಾಗಿ ಉನ್ನತಿ ಕರಿಸುವ ಗುರಿ ನಮ್ಮ ಸಂಸ್ಥೆ ಹೊಂದಿದೆ ಎಂದು ತಿಳಿಸಿದರು. ಸಂಸ್ಥೆಯ ಪದಾಧಿಕಾರಿಗಳು ಮತ್ತು ರೋಟರಿ ಕ್ಲಬ್‌ನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸುಮಾರು 140 ವೈದ್ಯರು ಇದರ ಸದುಪಯೋಗವನ್ನು ಪಡೆದುಕೊಂಡರು.




**ROTARIAN BIRTHDAY** *Greetings to*

| | |
|---|---|
| Rtn. Gururaj S. Girimaji | Jan-10 |
| Rtn. Iqbal Habib | Jan-13 |
| Rtn. Ravindra Kumar K. | Jan-13 |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764